ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಭವನ, 18ನೇ ಅಡ್ಡ ರಸ್ತೆ, ಮಲ್ಲೇಶ್ವರ, ಬೆಂಗಳೂರು-560012.

ಇಮೇಲ್:commissioner.pue@gmail.com ದೂರವಾಣಿ: 080-23561944. ಫ್ಯಾಕ್ಸ್:23361852.

ಸಂಖ್ಯೆ:ಪಿಯುಇ/ಕಟ್ಟಡ-03/ಕಾ.ಆ.ಸಂ./2020-21 ದಿ:20-05-2020.

## ಸುತ್ತೋಲೆ

1. ರಾಜ್ಯದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಸರ್ಕಾರಿ ಜಮೀನುಗಳು, ಮಂಜೂರು ಮಾಡಲಾದ ಸರ್ಕಾರಿ ಜಮೀನುಗಳು, ಪ್ರಮುಖ ದಾನಿಗಳು ದಾನದ ರೂಪದಲ್ಲಿ ನೀಡಿದ ಜಮೀನು, ಸದರಿ ಜಮೀನುಗಳಿಗೆ ಸಂಬಂಧಿಸಿದಂತೆ ಆಸ್ತಿ ಸಂರಕ್ಷಣೆಯು ಆಯಾ ಕಾಲೇಜುಗಳ ಮುಖ್ಯಸ್ಥರು/ಪ್ರಾಂಶುಪಾಲರು, ಅದರ ಪೂರ್ಣ ಜವಾಬ್ದಾರಿಯನ್ನು ಹೊಂದಿರುತ್ತಾರೆ.
2. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಎಫ್.ಡಿ 136exp-8/2019, ದಿ:20-12-2020ರನ್ವಯ ಜಿಲ್ಲಾ ಹಂತದಲ್ಲಿ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರ ನೇತೃತ್ವದಲ್ಲಿ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರ ಸಹಯೋಗದೊಂದಿಗೆ ಆಯಾ ತಾಲ್ಲೂಕುಗಳ ತಹಶೀಲ್ದಾರ್ ಹಾಗೂ ಪೋಲಿಸ್ ಇನ್ಸ್‌ಪೆಕ್ಟರ್ ಒಳಗೊಂಡಂತೆ ವಿಶೇಷ ಕಾರ್ಯಪಡೆಯನ್ನು ರಚಿಸಿ ರಾಜ್ಯದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಜಮೀನುಗಳನ್ನು ಗುರುತಿಸಿ ಸರ್ವೇ ಮಾಡಿಸಿ, ಯಾವುದೇ ಒತ್ತುವರಿಗಳಿದ್ದಲ್ಲಿ ತೆರವುಗೊಳಿಸಿ ಸರ್ಕಾರಿ ಆಸ್ತಿಗಳನ್ನು ಕಾಪಾಡಲು ಕ್ರಮವಹಿಸುವಂತೆ ಸೂಚಿಸಲಾಗಿದೆ.
3. ಸರ್ಕಾರದ ಆದೇಶ ಸಂಖ್ಯೆ: ಇಪಿ 12 ಯೋಯೋಕ 2019 ಬೆಂಗಳೂರು ದಿ:23-04-2020ರಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಆಸ್ತಿ ಸಂರಕ್ಷಣೆಗಾಗಿ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರನ್ನು ಎಸ್ಟೇಟ್ ಅಧಿಕಾರಿಗಳನ್ನಾಗಿ ನೇಮಕ ಮಾಡಿ ಆದೇಶಿಸಿದೆ.
4. ಒಂದು ವೇಳೆ ಶಾಲಾ/ಕಾಲೇಜಿನ ಆಸ್ತಿಗೆ ಸಂಬಂಧಿಸಿದಂತೆ ಒತ್ತುವರಿ ಕಂಡುಬಂದಲ್ಲಿ ಸಂಬಂಧಿಸಿದ ತಹಶೀಲ್ದಾರರ ಸಹಯೋಗದೊಂದಿಗೆ ಸರ್ವೇ ಮಾಡಿಸುವುದು ಹಾಗೂ ಒಂದು ವೇಳೆ ಒತ್ತುವರಿ ಖಾತರಿಗೊಂಡಲ್ಲಿ ಕೂಡಲೇ ಸಂಬಂಧಿಸಿದ ಠಾಣಾಧಿಕಾರಿಗಳಿಗೆ ದೂರು ದಾಖಲಿಸಿ ಒತ್ತುವರಿ ತೆರವುಗೊಳಿಸಲು ಸೂಕ್ತ ಕ್ರಮವಹಿಸತಕ್ಕದ್ದು.
5. ಕಾಲಕಾಲಕ್ಕೆ ಸರ್ಕಾರದಿಂದ ಒದಗಿಸುವ ಅನುದಾನದಿಂದ ಅಥವಾ ಸ್ಥಳೀಯ ಶಾಸಕರ ನಿಧಿಯಿಂದ ಅಥವಾ ಸ್ಥಳೀಯ ದಾನಿಗಳ ಸಹಾಯದಿಂದ/ಸ್ಥಳೀಯ ಸಂಪನ್ಮೂಲಗಳ ಸಹಾಯದಿಂದ ಸಂಬಂಧಿಸಿದ ಪ್ರಾಥಮಿಕ, ಪ್ರೌಢ ಶಾಲೆ, ಮತ್ತು ಕಾಲೇಜುಗಳ ಮುಖ್ಯಸ್ಥರುಗಳು ಕ್ರಮವಾಗಿ ಮುಖ್ಯೋಪಾಧ್ಯಾಯರು/ಉಪ ಪ್ರಾಂಶುಪಾಲರ/ಪ್ರಾಂಶುಪಾಲರ ಸಹಯೋಗದೊಂದಿಗೆ ಈಗಾಗಲೇ ನೋಂದಣಿಗೊಂಡಿರುವ ಆಸ್ತಿಯ ಸುತ್ತ ಕಾಂಪೌಂಡ್ ನಿರ್ಮಿಸಲು ಅಥವಾ ತಂತಿ ಬೇಲಿ ನಿರ್ಮಿಸಲು ಕ್ರಮವಹಿಸತಕ್ಕದ್ದು.
6. ತಮ್ಮ ವ್ಯಾಪ್ತಿಗೆ ಬರುವ ಜಿಲ್ಲೆಯ ಎಲ್ಲಾ ಅಧೀನ ಕಛೇರಿಯ ಅಧಿಕಾರಿಗಳೊಂದಿಗೆ ಕಾಲಕಾಲಕ್ಕೆ ಸಭೆ ನಡೆಸಿ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ/ ಪದವಿ ಪೂರ್ವ

ಕಾಲೇಜುಗಳ ಆಸ್ತಿಗಳು ನೋಂದಣಿಗೊಂಡಿರುವುದನ್ನು ಖಾತರಿಪಡಿಸಿಕೊಳ್ಳತಕ್ಕದ್ದು ಹಾಗೂ ತಮ್ಮ ವ್ಯಾಪ್ತಿಗೆ ಬರುವ ಸರ್ಕಾರಿ ಪ್ರಾಥಮಿಕ, ಪ್ರೌಢ ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳ ಆಸ್ತಿ ಒತ್ತುವರಿಯಾಗದಂತೆ ಕ್ರಮವಹಿಸತಕ್ಕದ್ದು.

7. ಒಂದು ವೇಳೆ ಒತ್ತುವರಿಯಾಗಿದ್ದಲ್ಲಿ ಕೂಡಲೇ ಒತ್ತುವರಿ ತೆರವುಗೊಳಿಸಲು ಕ್ರಮವಹಿಸತಕ್ಕದ್ದು ಹಾಗೂ ಈ ಸಂಬಂಧ ನ್ಯಾಯಾಲಯಗಳಲ್ಲಿ ದಾಖಲಾದ ವ್ಯಾಜ್ಯಗಳು ಶೀಘ್ರವಾಗಿ ಸರ್ಕಾರದ ಪರವಾಗಿ ಇತ್ಯರ್ಥಗೊಳ್ಳುವಂತೆ ಕ್ರಮವಹಿಸತಕ್ಕದ್ದು.
8. ನ್ಯಾಯಾಲಯಗಳಲ್ಲಿ ವ್ಯಾಜ್ಯ ಹೂಡಲಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ಕೂಡಲೇ ಸರ್ಕಾರಿ ವಕೀಲರ ಮುಖಾಂತರ ಆಕ್ಷೇಪಣಾ ಹೇಳಿಕೆಗಳನ್ನು ಸಲ್ಲಿಸಲು ಹಾಗೂ ನ್ಯಾಯಾಲಯದ ಪ್ರಕರಣಗಳನ್ನು ಸರ್ಕಾರದ ಪರವಾಗಿ ಇತ್ಯರ್ಥಗೊಳ್ಳುವಂತೆ ಕ್ರಮವಹಿಸತಕ್ಕದ್ದು.
9. ಯಾವುದೇ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆ/ ಪದವಿ ಪೂರ್ವ ಕಾಲೇಜುಗಳ ಆಸ್ತಿಯು ಪರಭಾರೆ/ಒತ್ತುವರಿಗೊಂಡಲ್ಲಿ ಸಂಬಂಧಿಸಿದ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು. ಆದ್ದರಿಂದ ಸರ್ಕಾರಿ ಆಸ್ತಿಯನ್ನು ಸಂರಕ್ಷಿಸುವಲ್ಲಿ ಹೆಚ್ಚಿನ ಮುತುವರ್ಜಿ ವಹಿಸಿ ಕಾರ್ಯನಿರ್ವಹಿಸತಕ್ಕದ್ದು. ಹಾಗೂ ಜಿಲ್ಲಾ ಉಪನಿರ್ದೇಶಕರುಗಳು ಸರ್ಕಾರಿ ಆಸ್ತಿಯು ಒತ್ತುವರಿ/ಪರಭಾರೆಯಾಗದಂತೆ ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು.ಸದರಿ ಕಾರ್ಯವನ್ನು ಆದ್ಯತೆಯ ಮೇರೆಗೆ ಪೂರ್ಣಗೊಳಿಸಲು ಕನಿಷ್ಠ ಕಾಲಮಿತಿಯನ್ನು ನಿಗದಿಪಡಿಸಿಕೊಂಡು ತುರ್ತು ಕ್ರಮಕೈಗೊಳ್ಳುವುದು.
10. ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರು ತಮ್ಮ ವ್ಯಾಪ್ತಿಗೆ ಬರುವ ಜಿಲ್ಲೆಯ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಆಸ್ತಿಗಳನ್ನು ಸಂರಕ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸತಕ್ಕದ್ದು.
11. ಇದಕ್ಕೆ ಸಂಬಂಧಿಸಿದಂತೆ ರಾಜ್ಯ ಮಟ್ಟದಲ್ಲಿ ಜಂಟಿ ನಿರ್ದೇಶಕರು ಆಡಳಿತ/ಮೂಲಭೂತ ಸೌಲಭ್ಯ ಇವರನ್ನು ರಾಜ್ಯಮಟ್ಟದ ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿದೆ.

M. Kyly

ನಿರ್ದೇಶಕರು

ಪದವಿ ಪೂರ್ವ ಶಿಕ್ಷಣ ಇಲಾಖೆ

ಇವರಿಗೆ

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ.
2. ರಾಜ್ಯದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ- ಉಪನಿರ್ದೇಶಕರುಗಳ ಮೂಲಕ.
3. ಇ-ಆಡಳಿತ ಶಾಖೆಗೆ ಅಂತರ್ಜಾಲದಲ್ಲಿ ಪ್ರಕಟಿಸಲು.
4. ನಿರ್ದೇಶಕರ ಆಪ್ತ ಶಾಖೆಗೆ ಮಾಹಿತಿಗಾಗಿ.

● ಸುತ್ತೋಲೆಗೆ ಸಂಬಂಧಿಸಿದಂತೆ ಕೆಳಕಂಡ ಅನುಬಂಧದಲ್ಲಿರುವಂತೆ ಮಾಹಿತಿಯನ್ನು ಕೂಡಲೇ ಕಛೇರಿಯ ಇ-ಮೇಲ್:-dpue.buildings@gmail.com ಮುಖಾಂತರ ದಿ:26-05-2020ರೊಳಗೆ ತಪ್ಪದೇ ಕಳುಹಿಸುವುದು.

<u>ಅನುಬಂಧ-2</u>

<u>ಜಿಲ್ಲಾ ಹಂತದಲ್ಲಿ ಸರ್ಕಾರಿ ಕಿರಿಯ, ಹಿರಿಯ ಮತ್ತು ಪ್ರೌಢಶಾಲೆಗಳ ಹಾಗೂ ಪದವಿ ಪೂರ್ವ ಕಾಲೇಜುಗಳ ಆಸ್ತಿಗಳ ನಿರ್ವಹಣೆಯ ಮಾಹಿತಿ</u>

| ಜಿಲ್ಲೆಯ ಹೆಸರು | ಒಟ್ಟು ಸರ್ಕಾರಿ ಶಾಲಾ/ಪ.ಪೂ.ಕಾಲೇಜು ಆಸ್ತಿಗಳ ಸಂಖ್ಯೆ | ಸರ್ಕಾರದಿಂದ ಮಂಜೂರಾದ ಶಾಲಾ/ಪ.ಪೂ.ಕಾಲೇಜು ಆಸ್ತಿಗಳ ಸಂಖ್ಯೆ | ದಾನಿಗಳಿಂದ ದಾನದ ರೂಪದಲ್ಲಿ ಪಡೆದ ಆಸ್ತಿಗಳ ಸಂಖ್ಯೆ | ಯಾವುದೇ ತಕರಾರು ಇಲ್ಲದೆ ನೋಂದಣಿಗೊಂಡಿರುವ ಸರ್ಕಾರಿ ಶಾಲಾ/ಪ.ಪೂ.ಕಾಲೇಜು ಆಸ್ತಿಗಳ ಸಂಖ್ಯೆ | ನೋಂದಣಿಗೊಳ್ಳದ ಸರ್ಕಾರಿ ಶಾಲಾ/ಪ.ಪೂ.ಕಾಲೇಜು ಆಸ್ತಿಗಳ ಸಂಖ್ಯೆ | ಒತ್ತುವರಿಗೊಂಡ ಸರ್ಕಾರಿ ಶಾಲಾ/ಪ.ಪೂ. ಕಾಲೇಜು ಆಸ್ತಿಗಳ ಸಂಖ್ಯೆ | ನ್ಯಾಯಾಲಯದಲ್ಲಿ ವ್ಯಾಜ್ಯವಿರುವ ಶಾಲಾ/ಪ.ಪೂ.ಕಾಲೇಜು ಆಸ್ತಿಗಳ ಸಂಖ್ಯೆ | ಷರಾ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |

ಸೂಚನೆ:1. ಕ್ರಮ ಸಂಖ್ಯೆ 6,7 ಮತ್ತು 8 ಕ್ಕೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ವಿವರಗಳೊಂದಿಗೆ ಕಾರಣ ನೀಡುವುದು.

2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ) ಇವರ ಅಧ್ಯಕ್ಷತೆಯಲ್ಲಿ ನಡೆಯುವ ಪ್ರತಿ ತಿಂಗಳ ಎಂಪಿಕ್ ಸಭೆಗೆ ಸದರಿ ಮಾಹಿತಿಯನ್ನು ಒದಗಿಸಬೇಕಾಗಿರುವುದರಿಂದ ತಾವುಗಳು ಪ್ರತಿ ತಿಂಗಳು 5 ನೇ ತಾರೀಖಿನೊಳಗೆ ತಪ್ಪದೇ ಒದಗಿಸಲು ಸೂಚಿಸಿದೆ.

3. ಅಂಕಿ ಅಂಶಗಳ ಮಾಹಿತಿಯನ್ನು ಸಲ್ಲಿಸದ್ದಿದ್ದರೆ ಆಯಾ ಜಿಲ್ಲಾ ಉಪನಿರ್ದೇಶಕರುಗಳನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು ಹಾಗೂ ಸದರಿ ಎಂಪಿಕ್ ಸಭೆಗೆ ಸಲ್ಲಿಸದೇ ಇರುವ ಜಿಲ್ಲೆಗಳ ಉಪನಿರ್ದೇಶಕರ ಮಾಹಿತಿಯನ್ನು ನೀಡಲಾಗುವುದು.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ